S.C. 53/2024.

# ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಸಂಚಾರಿ ನ್ಯಾಯಾಲಯ ಹುನಗುಂದ, ಇವರ ನ್ಯಾಯಾಲಯದಲ್ಲಿ.

**ಸತ್ರ ಮೊಕದ್ದಮೆ ಸಂಖ್ಯೆ: 53/2024.**

| | | | |
|---|---|---|---|
| ಹೆಸರು | : | ದುಂಡಪ್ಪ ಗಾಣಿಗೇರ | ಫ್ರಾಸಾ-02 |
| ತಂದೆಯ ಹೆಸರು | : | ಅಮರಪ್ಪ | ಚಾಸಾ-02 |
| ವಯಸ್ಸು | : | 35 ವರ್ಷ | |
| ಉದ್ಯೋಗ | : | ಖಾಸಗಿ ಕೆಲಸ | |
| ವಾಸಸ್ಥಳ | : | ನಂದವಾಡಗಿ | |

ದಿನಾಂಕ: 22-08-2025 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

**ಮುಖ್ಯ ವಿಚಾರಣೆ: ವಿಶೇಷ ಸರಕಾರಿ ಅಭಿಯೋಜಕರಿಂದ.**

ಮೃತ ಬಸವರಾಜ ಪರಿಚಯ. ಅವನು ಈಗ ಒಂದೂವರೆ ವರ್ಷದ ಹಿಂದೆ ತೀರಿಕೊಂಡಿದ್ದಾನೆ.

ದಿನಾಂಕ: 30-04-2024 ರಂದು ನಾನು ಸ್ಥಳಕ್ಕೆ ಹೋದಾಗ ಪೊಲೀಸರು ಬಂದು ಪಂಚನಾಮೆ ಜರುಗಿಸಿದ್ದಾರೆ. ಮೃತನ ತಲೆ ಮತ್ತು ಬಾಯಿಗೆ ಪೆಟ್ಟಾಗಿರುತ್ತದೆ. ಪಂಚನಾಮೆಯನ್ನು ಮಧ್ಯಾಹ್ನ 12.00 ರಿಂದ 1.00 ಗಂಟೆವರೆಗೆ ಮಾಡಿದ್ದಾರೆ. ನನ್ನ ಜೊತೆ ಚಾಸಾ-3 ಇದ್ದರು. ನಿಪಿ-1 ಮತ್ತು 2 ಪೋಟೋಗಳನ್ನು ನೋಡಿ ಗುರುತಿಸಿದ್ದೇನೆ. ಪಂಚನಾಮೆಯನ್ನು ನಿಪಿ-4 ಅಂತಾ, ಸಹಿಯನ್ನು ನಿಪಿ-4(ಎ) ಅಂತಾ ಗುರುತಿಸಲಾಯಿತು.

ಅದೇ ದಿನ ಮಧ್ಯಾಹ್ನ 1.30 ರಿಂದ 2.00 ಗಂಟೆವರೆಗೆ ಸ್ಥಳ ಪಂಚನಾಮೆ ಮಾಡಿದ್ದಾರೆ. ಅದರ ಅಡಿಯಲ್ಲಿ ರಕ್ತ ಹತ್ತಿದ, ರಕ್ತ ಹತ್ತದೆ ಇರುವ ಮಣ್ಣು, ಒಂದು ಬೈಕ, ಕಟ್ಟಿಗೆ, 2 ಮೊಬೈಲ ಅಮಾನತುಪಡಿಸಿಕೊಂಡಿದ್ದಾರೆ. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಪಂಚನಾಮೆಯನ್ನು ನಿಪಿ-5 ಅಂತಾ, ಸಹಿಯನ್ನು ನಿಪಿ-5(ಎ) ಅಂತಾ ಗುರುತಿಸಲಾಯಿತು. ರಕ್ತ ಹತ್ತಿದ ಮಣ್ಣು ಮುಮಾ-1 ಅಂತಾ, ರಿಯಲ್ ಮಿ ಮೊಬೈಲ ಮುಮಾ-2 ಅಂತಾ, ಚಪ್ಪಲಿಯನ್ನು ಮುಮಾ-3 ಅಂತಾ,

ಇನಫಿನಿಕ್ಸ ಮೊಬೈಲನ್ನು ಮುಮಾ-4 ಅಂತಾ, ರಕ್ತ ಹತ್ತಿದ ಶಾಲು ಮುಮಾ-5, ರಕ್ತ ಹತ್ತದೇ ಇರುವ ಮಣ್ಣು ಮುಮಾ-6 ಅಂತಾ, ಬ್ಲಡ ಸ್ಟೇನ್ಡ ಕಾಟನ ಮುಮಾ-7 ಅಂತಾ, ಕಂಟ್ರೋಲ್ ಸ್ಯಾಂಪಲ್ ಕಾಟನ ಮುಮಾ-8 ಅಂತಾ, ಹಿರೋ ಸ್ಲೆಂಡರ್ ಬೈಕ ಮುಮಾ-9 ಅಂತಾ, ವುಡನ್ ಸ್ಟಿಕ್ಕನ್ನು ಮುಮಾ-10, ಲುಂಗಿಯನ್ನು ಮುಮಾ-11 ಅಂತಾ, ಬಳಿ ಕ್ರೀಮ್ ಬಣ್ಣದ ಶರ್ಟನ್ನು ಮುಮಾ-12, ಬಿಳಿ ಬನಿಯನನ್ನು ಮುಮಾ-13 ಅಂತಾ, ನೀಲಿ ಚಡ್ಡಿಯನ್ನು ನಿಪಿ-14 ಅಂತಾ ಗುರುತಿಸಲಾಯಿತು.

**<u>ಪಾಟಿಸವಾಲುಃ ಆರೋಪಿತರ ಪರ ಶ್ರೀ. ಎಸ್.ಆರ್.ಕೆ. ವಕೀಲರಿಂದ.</u>**

ವೇಳೆ ಕೇಳಿದ್ದರಿಂದ ವೆಚ್ಚ ಸಹಿತ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ. ಸರಿ ಅದೆ.

22-08-2025
ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಸಂಚಾರಿ ನ್ಯಾಯಾಲಯ, ಹುನಗುಂದ.

S.C. 53/2024.

**ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಸಂಚಾರಿ ನ್ಯಾಯಾಲಯ ಹುನಗುಂದ, ಇವರ ನ್ಯಾಯಾಲಯದಲ್ಲಿ.**

**ಸತ್ರ ಮೊಕದ್ದಮೆ ಸಂಖ್ಯೆ: 53/2024.**

| | | | |
|---|---|---|---|
| ಹೆಸರು | : | ರತ್ನಮ್ಮ ವಗ್ಗರ | ಫ್ರಾಸಾ-01 |
| ಗಂಡನ ಹೆಸರು | : | ಮಲ್ಲಪ್ಪ | ಚಾಸಾ-01 |
| ವಯಸ್ಸು | : | 55 ವರ್ಷ | |
| ಉದ್ಯೋಗ | : | ಕೂಲಿ | |
| ವಾಸಸ್ಥಳ | : | ನಂದವಾಡಗಿ | |

ದಿನಾಂಕಃ 22-08-2025 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ.**

ಆರೋಪಿತರು ಪರಿಚಯ. 2 ನೇ ಆರೋಪಿ ನನ್ನ ಸೊಸೆ. ಚಾಸಾ-11 ನನ್ನ ಗಂಡ. ಚಾಸಾ-12 ರಿಂದ 18 ನನ್ನ ಸಂಬಂಧಿಕರು. ಮೃತ ಬಸವರಾಜ ನನ್ನ ಮಗ. ನನಗೆ ಒಟ್ಟು 6 ಜನ ಮಕ್ಕಳು.

ಮೃತ ಬಸವರಾಜ ಸಾಯುವ 3-4 ವರ್ಷಗಳ ಪೂರ್ವದಲ್ಲಿ ಕರಡಿ ಗ್ರಾಮದಲ್ಲಿ ವಾಸಿಸುತ್ತಿದ್ದ. ಅವನಿಗೆ 2 ಜನ ಹೆಣ್ಣು ಹಾಗೂ ಒಬ್ಬ ಗಂಡು ಮಗನಿದ್ದರು. ಅವರ ಹೆಸರು ಮಾಳಪ್ಪ ವಯಸ್ಸು 11 ವರ್ಷ, ಮೇಘವ್ವ ವಯಸ್ಸು 09 ವರ್ಷ, ಚಿನ್ನವ್ವ ವಯಸ್ಸು 07 ವರ್ಷ ಇರುತ್ತದೆ. ಅವರು ಈಗ ನನ್ನ ಹತ್ತಿರ ವಾಸಿಸುತ್ತಾರೆ. ಬಸವರಾಜ ಈಗ ಒಂದೂವರೆ ವರ್ಷದ ಹಿಂದೆ ಕೊಲೆಯಾಗಿದ್ದಾನೆ. ಕೊಲೆಯಾದ ಮರುದಿನ ಸಂಜೆ 6.00 ಗಂಟೆಗೆ ವಿಷಯ ಗೊತ್ತಾಯಿತು. ತಕ್ಷಣ 4-5 ಜನರು ಸೇರಿ ಕರಡಿ ಗ್ರಾಮದ ಬ್ಯಾಗರಹಳ್ಳಕ್ಕೆ ಹೋಗಿ ನೋಡಲಾಗಿ ಅಲ್ಲಿ ಶವವಿತ್ತು. ತಲೆ ಒಡೆದಿತ್ತು. ಅಲ್ಲಿ 2 ಫೋನಗಳು, 1 ಬೈಕ ಬಿದ್ದಿತ್ತು.

ಈಗ 2 ಫೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-1 ಮತ್ತು 2 ಅಂತಾ ಗುರುತಿಸಲಾಯಿತು. ಪಿರ್ಯಾದಿ ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಅಂತಾ ಗುರುತಿಸಲಾಯಿತು. ಅದರ ಮೇಲಿನ ಹೆಬ್ಬೆಟ್ಟು ನೋಡಿ ಗುರುತಿಸಿದ್ದೇನೆ.

ಕೊಲೆಯಾದ ಸ್ಥಳದಲ್ಲಿ ಮೃತನ ಹೆಂಡತಿ 2 ನೇ ಆರೋಪಿ ಇದ್ದಳು. ನಾವು ಹೋದ ಮರುದಿನ ಆರೋಪಿತರು ಕೊಲೆ ಮಾಡಿದ ವಿಷಯ ಗೊತ್ತಾಯಿತು. ನಂತರ ಪೊಲೀಸರು ನನ್ನನ್ನು ಠಾಣೆಗೆ ಕರೆಯಿಸಿ ವಿಚಾರಣೆ ಮಾಡಿದ್ದಾರೆ. 2 ನೇ ಆರೋಪಿ ಹಾಗೂ ಇನ್ನೊಬ್ಬ ಕೊರವರ ವ್ಯಕ್ತಿ ಮಾಡಿದ್ದಾನೆ ಅಂತಾ ಗೊತ್ತಾಯಿತು. ಯಾವ ವಿಷಯಕ್ಕೆ ಕೊಲೆಯಾಗಿದೆ ನನಗೆ ಗೊತ್ತಿಲ್ಲ.

ಶ್ರೀಗಂಧದ ಕಟ್ಟಿಗೆಯಿಂದ ಹೊಡೆದು ಕೊಲೆ ಮಾಡಿದ್ದಾರೆ ಅಂತಾ ಗೊತ್ತಾಯಿತು.

(ಈ ಹಂತದಲ್ಲಿ ಸಾ.ಅ.ರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟಿಸವಾಲು ಮಾಡಲು ಅನುಮತಿ ಕೋರಿದ್ದರಿಂದ, ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ಪ್ರತಿಕೂಲ ಸಾಕ್ಷ್ಯ ನೀಡಿರುವುದು ಮನದಟ್ಟಾಗಿರುವುದರಿಂದ, ಕೋರಿರುವ ಅನುಮತಿಯನ್ನು ನೀಡಲಾಯಿತು)

**ಪಾಟಿಸವಾಲುಃ ವಿಶೇಷ ಸಾರ್ವಜನಿಕ ಅಭಿಯೋಜಕರಿಂದ.**

ದಿನಾಂಕಃ 02-05-2024 ರಂದು ಪೊಲೀಸರು ನ್ಯಾಯಾಲಯದ ಮುಂದಿರುವ 3 ಜನ ಆರೋಪಿತರನ್ನು ದಸ್ತಗಿರಿ ಮಾಡಿದ್ದಾರೆ ಎನ್ನುವುದು ನಿಜ. 2 ನೇ ಆರೋಪಿ ಮಾರುತಿ ಎನ್ನುವವನ ಜೊತೆ ಅನೈತಿಕ ಸಂಬಂಧ ಹೊಂದಿರುವುದು ಮೃತನಿಗೆ ಗೊತ್ತಾಗಿರುವುದರಿಂದ ಅವನು ತೊಂದರೆ ಮಾಡಬಹುದು ಎಂದು 3 ಜನರು ಸೇರಿ ಕೊಲೆ ಮಾಡಿದ್ದಾರೆ ಅಂತಾ ಗೊತ್ತಾಯಿತು.

ದಿನಾಂಕಃ 29-04-2024 ರಂದು ರಾತ್ರಿ ನಂದವಾಡಗಿ ರಸ್ತೆಯಲ್ಲಿ ಬೈಕ್ ಮೇಲೆ ಮೃತ ಬಸವರಾಜ ಬರುವಾಗ ಹಳ್ಳದ ಬ್ರಿಡ್ಜ ಹತ್ತಿರ ಆರೋಪಿತರು ರಸ್ತೆಗೆ ಅಡ್ಡಲಾಗಿ ಮುಳ್ಳುಕಂಟಿಯನ್ನು ಹಚ್ಚಿದ್ದು, ಮುಳ್ಳುಕಂಟಿ ತೆಗೆಯುವಾಗ ಹಿಂದಿನಿಂದ ಬಂದು 1 ನೇ ಆರೋಪಿ ಕಟ್ಟಿಗೆ ಬಡಿಗೆಯಿಂದ ಅವನ ತಲೆಗೆ ಹೊಡೆದ, ಉಳಿದ ಆರೋಪಿತರೂ ಸಹ ಕಟ್ಟಿಗೆಯಿಂದ ಹೊಡೆದು ಕೊಲೆ ಮಾಡಿ ತಲೆಗೆ ಲುಂಗಿ ಕಟ್ಟಿ ಮೋಟರ್ ಸೈಕಲ್ ಮೇಲಿಂದ ಬಿದ್ದು ಸತ್ತಿದ್ದಾನೆ ಎಂಬಂತೆ ಮಾಡಿದ್ದಾರೆ ಎನ್ನುವುದು ನಿಜ.

**ಪಾಟಿಸವಾಲುಃ ಆರೋಪಿತರ ಪರ ಶ್ರೀ. ಎಸ್.ಆರ್.ಕೆ. ವಕೀಲರಿಂದ.**

ವೇಳೆ ಕೇಳಿದ್ದರಿಂದ ವೆಚ್ಚ ಸಹಿತ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

22-08-2025

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಸಂಚಾರಿ ನ್ಯಾಯಾಲಯ, ಹುನಗುಂದ.